ಈ) ಭಾಗ್ಯಜ್ಯೋತಿ ಯೋಜನೆಯನ್ನು ೧೯೯೦–೯೧ನೇ ಸಾಲಿನಲ್ಲಿಯೂ ಸಹಾ ಮುಂದುವರಿಸಲಾಗುತ್ತಿದೆ.

ಶ್ರೀ ಕೆ. ಹರ್ಷಕುಮಾರ್ ಗೌಡ.—ಉತ್ತರದಲ್ಲಿ ಇಡೀ ರಾಜ್ಯದಲ್ಲಿ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಮೂರವರೆ ಲಕ್ಷ ಜನ ಫಲಾನುಭವಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲಾಗಿದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಮತಕ್ಷೇತ್ರವನ್ನು ನೋಡಿದಾಗ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಒದಗಿಸದೆ ಇರುವುದು ಗೊತ್ತಾಗುತ್ತದೆ. ಮತ್ತೊಂದು ಉತ್ತರದಲ್ಲಿ ಭಾಗ್ಯಜ್ಯೋತಿ ಯೋಜನೆಯನ್ನು ಮುಂದುವರಿಸಲಾಗಿದೆ ಎಂದು ಕೂಡ ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಈ ಯೋಜನೆ ಎಲ್ಲಿಯೂ ಕೂಡ ಸರಿಯಾಗಿ ಕಾರ್ಯಗತವಾಗುತ್ತಿಲ್ಲ. ಇದನ್ನು ಸರ್ಕಾರದವರು ಸರಿಯಾಗಿ ಕಾರ್ಯಗತ ಗೊಳಿಸುತ್ತೀರಾ ? ಈ ಯೋಜನೆಗೆ ಒಂದು ಯೂನಿಟ್‌ಗೆ ೨೫೦ ರೂಪಾಯಿಯನ್ನು ಕೊಡುತ್ತಿದ್ದು, ಆ ಹಣ ಅತ್ಯಂತ ಬಹಳ ಕಡಿಮೆ ಮಟ್ಟದ್ದಾಗಿರುತ್ತದೆ. ಇದನ್ನು ಹೆಚ್ಚು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗುತ್ತದೆಯೇ ? ಎರಡನೆಯದಾಗಿ ನಮ್ಮ ನಗರದಲ್ಲಿ ಸಂಪೂರ್ಣವಾಗಿ, ನಿರಂತರವಾಗಿ ವಿದ್ಯುತ್ ಕಡಿತವಾಗುತ್ತಿದೆ. ಇದರಿಂದ ಎಲ್ಲಾ ಕ್ಷೇತ್ರಗಳಲ್ಲಿ ಇದರ ಪ್ರಭಾವ ಹೆಚ್ಚಿಗೆ ಆಗುತ್ತಿರುತ್ತದೆ. ವಾಣಿಜ್ಯ ಕ್ಷೇತ್ರವಿರಬಹುದು, ಕೈಗಾರಿಕಾ ಕ್ಷೇತ್ರವಿರಬಹುದು, ಔದ್ಯೋಗಿಕ ಕ್ಷೇತ್ರವಿರಬಹುದು, ಎಲ್ಲಾ ಕ್ಷೇತ್ರಗಳಿಗೆ ವಿದ್ಯುತ್ ಹಿನ್ನೆಡೆ ಇದರಿಂದ ಆಗುತ್ತಿದೆ. ಇದನ್ನು ತುರ್ತಾಗಿ ಸರಿಪಡಿಸಲು ಮಾನ್ಯ ಮುಖ್ಯ ಮಂತ್ರಿಗಳಿಗೆ ಸಾಧ್ಯವಾಗುತ್ತದೆಯೇ ?

ಶ್ರೀ ಎಸ್. ಬಂಗಾರಪ್ಪ. —ಈ ಪ್ರಶ್ನೆಯಲ್ಲಿ ಬಂದಿರತಕ್ಕದ್ದು ಎರಡೇ ಎರಡು ವಿಚಾರ ಮಾತ್ರ. ಒಂದು ನಾವು ಹೊರ ರಾಜ್ಯದಿಂದ ಖರೀದಿ ಮಾಡುತ್ತಿರುವ ವಿದ್ಯುತ್ ಪ್ರಮಾಣ ಎಷ್ಟು ? ಅದರ ದರ ಎಷ್ಟು ? ಮತ್ತೊಂದು ಮಾನ್ಯ ಸದಸ್ಯರ ಪ್ರಶ್ನೆ ಭಾಗ್ಯಜ್ಯೋತಿಗೆ ಸಂಬಂಧಪಟ್ಟದ್ದಾದ್ದು. ಭಾಗ್ಯ ಜ್ಯೋತಿ ಯೋಜನೆಯನ್ನು ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನು ಮುಂದುವರಿಸುತ್ತೇವೆ. ಆದರೆ ಬಹಳ ಕಡಿಮೆಯಾಗಿದೆ ಎನ್ನುವ ಮಾತನ್ನು ನಾನು ಒಪ್ಪುವುತ್ತೇನೆ. ಏಕೆಂದರೆ ಭಾಗ್ಯಜ್ಯೋತಿ ಯೋಜನೆಯಿಂದ ಸಮಾಜದಲ್ಲಿರತಕ್ಕ ಬಡತನದ ರೇಖೆಯಿಂದ ಕೆಳಗೆ ಇರತಕ್ಕ ವರ್ಗಗಳಿಗೆ ಸಹಾಯ ವಾಗುತ್ತದೆ ಈ ಒಂದು ವಿಚಾರದಲ್ಲಿ ಬಹಳ ಮಂದಗತಿಯಾಗಿದೆ ಎನ್ನುವ ಮಾತನ್ನು ನಾನೂ ಒಪ್ಪಲೇಬೇಕಾಗುತ್ತದೆ ಬಡವರಿಗೆ ಈ ಯೋಜನೆಯನ್ನು ಮಾಡುವುದಕ್ಕೆ ಕೂಡಲೆ ಕಾರ್ಯಕ್ರಮವನ್ನು ಹಾಕುತ್ತೇವೆ. ಜಾಸ್ತಿ ಮನೆಗಳಿಗೆ ವಿದ್ಯುಚ್ಛಕ್ತಿ ಕೊಡುವುದಕ್ಕೆ ನಾವು ಗಮನಹರಿಸುತ್ತೇವೆ. ಮತ್ತೊಂದು ಪ್ರಶ್ನೆ ಯಾವುದು.

ಶ್ರೀ ಕೆ. ಹರ್ಷಕುಮಾರ್‌ಗೌಡ.—ವಿದ್ಯುಚ್ಛಕ್ತಿ ಕೊರತೆಯನ್ನು ತಪ್ಪಿಸಿ ಇಲಾಖೆಯ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ನೇರವಾದ ಪ್ರಶ್ನೆ ಇಲ್ಲದಿದ್ದರೂ ಕೂಡ ಮಾನ್ಯ ಸದಸ್ಯರಿಗೆ ಉತ್ತರವನ್ನು ಕೊಟ್ಟರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ತಪ್ಪು ಅಪ್ಪಣೆಯನ್ನು ಪಡೆದು ಉತ್ತರವನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಕೇಳಿದ್ದಕ್ಕೆಲ್ಲ ಉತ್ತರ ಕೊಟ್ಟರೆ ತಪ್ಪಾಗುತ್ತದೆ. ಯಾವುದು ಅಪ್ರಕೃತ ವಾಗುತ್ತದೆಯೋ ಯಾವುದು ಮೂಲ ಪ್ರಶ್ನೆ ಇಲ್ಲವೋ ಅಂತಹದ್ದಕ್ಕೆ ಉತ್ತರ ಕೊಡಬೇಕಾಗಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆದರೂ ಕೂಡ ಉತ್ತರ ಹೇಳುತ್ತೇನೆ. ಕೆ. ಇ. ಬಿ. ಆಡಳಿತ ಮಂಡಳಿಯಲ್ಲಿ ಬಹಳ ಸೋರಿಕೆಯಾಗುತ್ತಿದೆ ಅದನ್ನು ಒಪ್ಪುತ್ತೇನೆ. ಆದರ ಬಗ್ಗೆ ಬಹಳ ವಿವರಗಳು ಇವೆ. ಪ್ರತ್ಯೇಕವಾಗಿ ವಿವರ ಕೊಡುವ ಸಂದರ್ಭ ಬರುತ್ತದೆ ಆಗ ಕೊಡುತ್ತೇನೆ. ಈಗ ಆ ವಿವರಕ್ಕೆ ಹೋಗುವುದು ಬೇಡ.

ಹಾಸನ ಪಕ್ಕದ ಚನ್ನಪಟ್ಟಣದ ಕೆರೆಯನ್ನು ಒಡೆದು ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣ ಹಾಗೂ ನಿವೇಶನಗಳ ಹಂಚಿಕೆ

೧೬೮. ಶ್ರೀ ಕೆ. ಎಚ್. ಹನುಮೇಗೌಡ (ಹಾಸನ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಪಟ್ಟಣದ ಪಕ್ಕದ ಚನ್ನಪಟ್ಟಣದ ಕೆರೆಯನ್ನು ಒಡೆದು ಕೆರೆಯ ಅಂಗಳದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್, ಬಡವರಿಗೆ ನಿವೇಶನ ಹಂಚಿಕೆ ಮುಂತಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುವ ಯೋಜನೆಯೇನಾದರೂ ಸರ್ಕಾರಕ್ಕಿದೆಯೇ ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಅಂಥ ಯಾವುದೇ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

SRI AZEEZ SAIT.—Sir, two questions are clubed, KSRTC and distribution ot free sites. I don't know how it comes. The question itself is confusing. So, I request the Hon. member to correct the question and ask another question,

ಅಧ್ಯಕ್ಷರು.—ಕೆ.ಎಸ್.ಆರ್.ಟಿ.ಸಿ ಗೂ ನಿವೇಶನ ಹಂಚಿಕೆಗೂ ಏನು ಸಂಬಂಧ ಇದೆ ?

ಶ್ರೀ ಕೆ. ಹೆಚ್. ಹನುಮೇಗೌಡ.—ಪಕ್ಕದಲ್ಲಿ ಕೆರೆ ಇದೆ, ಆ ಕೆರೆಯ ಹಿಂಭಾಗದಲ್ಲಿ ಸುಮಾರು ೪೦೦ ಎಕರೆ ಜಾಗವಿದೆ. ಹಾಸನ ಟೌನಿನ ಕೊಳೆಯೆಲ್ಲ ಹೋಗಿ ಅಲ್ಲಿ ಶೇಖರಣೆಯಾಗುತ್ತಿದೆ. ಅಲ್ಲಿ ವಿಪರೀತ ಸೊಳ್ಳೆಗಳ ಕಾಟ ಜಾಸ್ತಿಯಾಗಿದೆ. ಅದರಿಂದ ಬಡವರಿಗೆ ಆರೋಗ್ಯ ಕೊಟ್ಟುಹೋಗಿದೆ. ಬಸ್ ನಿಲ್ದಾಣ ಮುಂತಾದ ಸಾರ್ವಜನಿಕ ಪ್ರದೇಶಗಳಿಗೆ ಹಾಸನ ಟೌನಿನಲ್ಲಿ ಜಾಗವಿಲ್ಲ. ಐದಾರು ವರ್ಷದ ಕೆಳಗಡೆ ಆ ಕೆರೆಯನ್ನು ಹೊಡೆದು ಬಡವರಿಗೆ ಸೈಟುಗಳನ್ನು ಹಂಚಲು ಮತ್ತು ಬಸ್ ನಿಲ್ದಾಣವನ್ನು ಮಾಡಂವುದಕ್ಕೆ ಪರಿಶೀಲನೆಯಲ್ಲಿದೆ ಎಂದು ಪೇಪರ್‌ನಲ್ಲಿ ಬಂದಿರುವುದನ್ನು ಓದಿದ್ದೇನೆ.

SRI AZEEZ SAIT.—I will get it examined.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ವಿಚಾರ ಪರಿಶೀಲನೆಯಲ್ಲಿ ಇಲ್ಲ ಎಂದು ಹೇಳಿದ್ದಾರೆ. ಕೆರೆಯನ್ನು ಒಡೆಯಂವುದಕ್ಕೆ ಯಾರದ್ದೂ ಅಭ್ಯಂತರವಿಲ್ಲ. ಇದರಿಂದ ಬಡವರಿಗೆ ನಿವೇಶನ ಸಿಗುತ್ತದೆ ಹಾಗೂ ಒಳ್ಳೆಯ ಬಸ್ ಸ್ಟ್ಯಾಂಡ್ ಆತ ಜನಗಳಿಗೆ ಅನುಕೂಲವಾಗುತ್ತದೆ. ಇದನ್ನು ಮಾಡುವುದಕೆ ಸರ್ಕಾರಕ್ಕಿರುವ ತೊಂದರೆಯೇನು ?

ಶ್ರೀ ಆಜೀಜ್ ಸೇಠ್.—ಮಾಡುವುದಿಲ್ಲವೆಂದು ಹೇಳಿಲ್ಲ. ತಾವು ಅರ್ಥವಾಗುವ ರೀತಿಯಲ್ಲಿ ಪ್ರಶ್ನೆಯನ್ನು ಕೇಳಿದ್ದೀರಿ. ನಾನು ಅರ್ಥಮಾಡಿಕೊಂಡು ಹೇಳುತ್ತೇನೆ. ಎಗ್ಸಾಮಿನ್ ಮಾಡಿಸುತ್ತೇನೆ

ಅಧ್ಯಕ್ಷರು.—ಅರ್ಥ ಮಾಡಿಕೊಂಡು ಎಗ್ಸಾಮಿನ್ ಮಾಡಿಸುತ್ತಾರೆ.

ರಾಜ್ಯದಲ್ಲಿ ಹೊಸ ಜಲ ವಿದ್ಯುತ್ ಯೋಜನೆಗಳು

೧೯೨೨. **ಶ್ರೀ ಆರ್. ಎಸ್. ನಾಯಕ್ (ಭಟ್ಕಳ).—**ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಎಲ್ಲೆಲ್ಲಿ ಹೊಸದಾಗಿ ಜಲ ವಿದ್ಯುತ್ ಯೋಜನೆಯನ್ನು ಸ್ಥಾಪಿಸಬಹುದೆಂಬುದರ ಬಗ್ಗೆ ಸರ್ಕಾರ ಮಾಹಿತಿ ಹೊಂದಿದೆಯೇ

ಆ) ರಾಜ್ಯದ ವಿದ್ಯುತ್ ಕೊರತೆಯ ಪ್ರಮಾಣ ಎಷ್ಟು

ಇ) ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಯೋಜನೆ ಬಗ್ಗೆ ಈತನಕ ಎಷ್ಟು ಹಣ ಖರ್ಚು ಮಾಡಲಾಗಿದೆ ಮತ್ತು ಈ ಯೋಜನೆಯನ್ನು ಜಾರಿಗೊಳಿಸಲು ಸರ್ಕಾರ ಆಸಕ್ತವಾಗಿದೆಯೇ

ಈ) ಅಘನಾಶಿನಿ ಯೋಜನೆಯ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು).—

ಅ) ಹೌದು

ಆ) ಪ್ರಸಕ್ತ ಸಾಲಿಗೆ ಸುಮಾರು ೪೮೬೧ ದಶಲಕ್ಷ ಯೂನಿಟ್ಟುಗಳಷ್ಟು ಕೊರತೆ ಇದೆ.

ಇ) ಈವರೆಗೆ ರೂ. ೬೭೩ ಲಕ್ಷ ರೂ. ವೆಚ್ಚವಾಗಿದೆ. ಸರ್ಕಾರವು ಈವರೆಗೆ ಯಾವುದೇ ನಿರ್ದಿಷ್ಟ ನಿಲುವು ತೆಗೆದುಕೊಂಡಿಲ್ಲ.

ಈ) ಮುಳಂಗಡೆ ಪ್ರದೇಶದ ಪ್ರಮಾಣವನ್ನು ಕಡಿಮೆ ಮಾಡಲು ಜಲಾಶಯದ ಪೂರ್ಣ ಮಟ್ಟವನ್ನು ಕಡಿಮೆ ಮಾಡಿ ಬದಲಿ ಯೋಜನೆ ರೂಪಿಸಲು ಅನ್ವೇಷನೆ ಕಾರ್ಯ ನಡೆಯುತ್ತಿದೆ.

ಶ್ರೀ ಆರ್. ಎನ್. ನಾಯಕ್.—ರಾಜ್ಯದಲ್ಲಿ ಹೊಸದಾಗಿ ಜಲವಿದ್ಯುತ್ ಯೋಜನೆಗಳನ್ನು ಸ್ಥಾಪನೆ ಮಾಡುವುದರ ಬಗ್ಗೆ ಸರ್ಕಾರ ಮಾಹಿತಿಯನ್ನು ಹೊಂದಿದೆಯೇ ? ಎಲ್ಲೆಲ್ಲಿ ಜಲವಿದ್ಯುತ್